

ಮೈಸೂರಿನ ಉದ್ಬೂರು ಗ್ರಾಮದಲ್ಲಿ ವೀಳ್ಯದೆಲೆ ಕೃಷಿನಿರತ ರೈತ

**'ಅರ್ಧ ಗಂಟೆ ಸಂತೆ'ಯಲ್ಲಿ ವ್ಯಾಪಾರವಾಗುತ್ತಿದ್ದ 'ಮೈಸೂರು ವೀಳ್ಯದೆಲೆ', ಜಿಐ ಟ್ಯಾಗ್ ಕಾರಣದಿಂದ ಜಪಾನ್, ಮಾಲ್ಡೀವ್ಸ್, ಮಲೇಷ್ಯಾ ಮಾರುಕಟ್ಟೆಗೆ ಕಾಲಿಟ್ಟಿದೆ. ಮೈಸೂರು ವೀಳ್ಯದೆಲೆ ಘಮಲು ಎಲ್ಲೆಲ್ಲೂ ಪಸರಿಸುತ್ತಿದೆ.**



ವೀಳ್ಯದೆಲೆ ಎಣಿಸಿ ಪಿಂಡಿ ಕಟ್ಟುತ್ತಿರುವ ರೈತ

### ವೀಳ್ಯದೆಲೆ ಗ್ರಾಮವ ಕಂಡೀರಾ...

ಮೈಸೂರು ನಗರದಿಂದ ಸುಮಾರು 12 ಕಿ.ಮೀ. ದೂರದಲ್ಲಿ ಉದ್ಬೂರು ಎಂಬ ಗ್ರಾಮವಿದೆ. ಇದನ್ನು 'ವೀಳ್ಯದೆಲೆಯ ಪ್ರದೇಶ ಅಥವಾ ಗ್ರಾಮ' ಎಂದೂ ಗುರುತಿಸುತ್ತಾರೆ. ತೋಟಗಾರಿಕಾ ಇಲಾಖೆಯ ಲೆಕ್ಕಾಚಾರದ ಪ್ರಕಾರ ಜಿಲ್ಲೆಯಲ್ಲಿ ಸುಮಾರು 300 ಎಕರೆ ಪ್ರದೇಶದಲ್ಲಿ 'ಮೈಸೂರು ವೀಳ್ಯದೆಲೆ' ಬೆಳೆಯುತ್ತಿದ್ದಾರೆ. ಅವುಗಳಲ್ಲಿ ಉದ್ಬೂರಿನ ರೈತರದ್ದೇ ಸಿಂಹಪಾಲು.

ಇಲ್ಲಿ ಮೂರು ಸಾವಿರ ಕುಟುಂಬಗಳಿವೆ. ಪ್ರತಿ ಮನೆಯಲ್ಲೂ ವೀಳ್ಯದೆಲೆ ತೋಟವಿದೆ. 3 ಗುಂಟೆಯಿಂದ 20 ಗುಂಟೆಯವರೆಗೂ ಬೆಳೆಯುವ ರೈತರಿದ್ದಾರೆ. ಗಂಡಸರು ಗಿಡ ನೆಡುವ ಕೆಲಸ ನೋಡಿಕೊಂಡರೆ, ಅದನ್ನು ಪೋಷಿಸಿ, ಕಟಾವು ಮಾಡಿ ಮಾರುಕಟ್ಟೆಗೆ ಕೊಂಡೊಯ್ಯುವಲ್ಲಿ ಮಹಿಳೆಯರೂ ಕೈ ಜೋಡಿಸುತ್ತಾರೆ. ಹೀಗಾಗಿ ಈ ಭಾಗದಲ್ಲಿ ಕುಟುಂಬದ ವರದಾನವಾಗಿ ವೀಳ್ಯದೆಲೆ ಗುರುತಿಸಿಕೊಂಡಿದೆ.

'ನಾನು ಶಾಲೆ ಹತ್ತಿಲ್ಲ. ವೀಳ್ಯದೆಲೆ ಕೃಷಿಯ ಬಗ್ಗೆ ವಿಪರೀತ ಆಸಕ್ತಿ. ಅದನ್ನು ಬೆಳೆದು ಮಾರಿದ ದುಡ್ಡಿನಿಂದಲೇ



ಸಂತೆ ಮಾರುಕಟ್ಟೆಯಲ್ಲಿ ವೀಳ್ಯದೆಲೆ ವ್ಯಾಪಾರ ಬಲು ಜೋರು

ಕುಟುಂಬವನ್ನು ಸಾಕಿ, ಮಕ್ಕಳನ್ನು ಓದಿಸಿದ್ದೇನೆ' ಎಂದು ರೈತ ಸೋಮಣ್ಣ ಹೆಮ್ಮೆಯಿಂದ ಹೇಳಿದರು.

ಈ ಊರನ್ನು ಬಿಟ್ಟರೆ ಟಿ. ಕಾಟೂರು, ಮಾರ್ಬಳ್ಳಿ, ಗುಮಚನಹಳ್ಳಿಯಲ್ಲೂ ಈ ಬೆಳೆ ಕಾಣಸಿಗುತ್ತದೆ. ಪದವಿ ಶಿಕ್ಷಣ ಮುಗಿಸಿ ನಗರದ ರುಚಿ ನೋಡಿದವರೂ, ಮತ್ತೆ ಬಂದು ಗ್ರಾಮದಲ್ಲಿ ವೀಳ್ಯದೆಲೆ ಕೃಷಿ ಮುಂದುವರೆಸುತ್ತಿರುವ ಉದಾಹರಣೆಗಳಿವೆ.

'ಇದು ಶ್ರಮ ಬೇಡುವ ಕೃಷಿ, ಬಹಳ ಹಿಂದಿನಿಂದಲೇ ನಾಯಕ ಸಮುದಾಯ, ಪರಿಶಿಷ್ಟ ಜಾತಿ, ಪಂಗಡದ ಜನ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ' ಎನ್ನುತ್ತಾರೆ ವೀಳ್ಯದೆಲೆ ಬೆಳೆಗಾರ ಎನ್. ಮರಂಕಯ್ಯ.




ವೀಳ್ಯದೆಲೆ ಪಿಂಡಿಯೊಂದಿಗೆ ಮಾರುಕಟ್ಟೆಗೆ ಹಾಜರು

**ಏ. 09ರ ಸಂಚಿಕೆಯ ಚೆನ್ನುಡಿ 'ಬಿಸಿಲ್ನಾಡಿನಾಗ, ಸಮೃದ್ಧಿ ಪೈರಿನ ಮುಂಡರಗಿ' ಕೇಳಿ, ಸಿ.ಕೆ. ಗಣಪ್ಪನವರ ಮುಂಡರಗಿ ಅವರ ಧ್ವನಿಯಲ್ಲಿ...**

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

